ಅ) ಪ್ರೌಢ ಶಾಲಾ ಬೋಧಕ ಹುದ್ದೆಗಳನ್ನು ವಿಭಾಗೀಯ ಮಟ್ಟದ ನೇಮಕಾತಿ ಸಮಿತಿಯ ಮೂಲಕ ಹಾಗೂ ಪ್ರಾಥಮಿಕ ಶಾಲೆಗಳ ಬೋಧಕ ಹುದ್ದೆಗಳನ್ನು ಜಿಲ್ಲಾ ಮಟ್ಟದ ನೇಮಕಾತಿ ಸಮಿತಿಗಳ ಮೂಲಕ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಇ) ೧. ಪ್ರಥಮ ದರ್ಜೆ ಸಹಾಯಕರ ಹುದ್ದೆಗಳು ೫೬
೨. ನಾಲ್ಕನೆ ದರ್ಜೆ ನೌಕರರು ೪೯೨

ಈ) ಈಗ ಆರ್ಥಿಕ ಮಿತವ್ಯಯ ಆದೇಶವು ಜಾರಿಯಲ್ಲಿರುವುದರಿಂದ ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಲು ಅವಕಾಶವಿಲ್ಲ.

ಶ್ರೀ ಎ. ಕೃಷ್ಣಪ್ಪ.—ಮಾನ್ಯ ಮಂತ್ರಿಗಳ ಉತ್ತರದಲ್ಲಿ ಕಾಲಮಿತಿ ಕಾರ್ಯಕ್ರಮದ ಬಗ್ಗೆ ಏನೊಂದು ಸೂಚನೆಯನ್ನೂ ಕೊಟ್ಟಿಲ್ಲ. ದಯಮಾಡಿ ಸೂಚನೆಯನ್ನು ಕೊಡಬೇಕು. ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಿಲ್ಲ, ಆ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆಯೆಂದು ಕೇಳುತ್ತೇನೆ.

ಶ್ರೀ ಬಿ. ಸೋಮಶೇಖರ್.—ಈಗಾಗಲೇ ಸರ್ಕಾರ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲಿಕ್ಕೆ ಕ್ರಮ ತೆಗೆದುಕೊಂಡು ನೇಮಕಾತಿ ಸಮಿತಿಗಳನ್ನು ರಚನೆ ಮಾಡಲಾಗಿದೆ. ಆದಷ್ಟು ಬೇಗ ಸಮಿತಿಗಳು ಕೆಲಸ ಮಾಡಿ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

ಶ್ರೀ ಎ. ಕೃಷ್ಣಪ್ಪ.—ಕಾಲಮಿತಿಯ ಬಗ್ಗೆ ಸ್ಪಷ್ಟವಾದ ನೇರವಾದ ಉತ್ತರವನ್ನು ನಿರೀಕ್ಷಿಸುತ್ತಿದ್ದೇನೆ.

ಶ್ರೀ ಬಿ. ಸೋಮಶೇಖರ್.—ಯಾವುದರ ಬಗ್ಗೆ ನೇರವಾದ ಉತ್ತರ ಬೇಕು ?

ಶ್ರೀ ಎ. ಕೃಷ್ಣಪ್ಪ.—ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ನೇಮಕಾತಿಯ ಬಗ್ಗೆ.

ಶ್ರೀ ಬಿ. ಸೋಮಶೇಖರ್.—ಎರಡು ತಿಂಗಳೊಳಗಾಗಿ ಖಾಲಿಯಿರತಕ್ಕ ಹುದ್ದೆಗಳನ್ನು ನೇಮಕಾತಿ ಸಮಿತಿಯ ಮುಖಾಂತರ ಭರ್ತಿ ಮಾಡಲಾಗುವುದು.

ಕರ್ನಾಟಕ ಆಗ್ರೋ ಕಾರನ್ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ಕನ್ನಡ ಹಾಗೂ ಕನ್ನಡೇತರ ನೌಕರರ ಬಗ್ಗೆ.

೨೦. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯ್ಕನಹಳ್ಳಿ).—ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಮಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ಆಗ್ರೋ ಕಾರನ್ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ಕನ್ನಡ ಹಾಗೂ ಕನ್ನಡೇತರ ನೌಕರರ ಸಂಖ್ಯೆ ಎಷ್ಟು ?

ಆ) ಸದರಿ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರು ಕನ್ನಡಿಗ ನೌಕರರಿಗೆ ಕಿರುಕುಳ ಕೊಡುತ್ತಿರುವುದಲ್ಲದೆ ಅಮಾನತ್ತಿನಲ್ಲಿಡುವುದಾಗಿ ಹಾಗೂ ಕೆಲಸದಿಂದ ತೆಗೆಯುವುದಾಗಿ ಬೆದರಿಸಿ ಅವರಿಂದ ಹಣ ವಸೂಲಿ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಇ) ಸದರಿ ವ್ಯವಸ್ಥಾಪಕ ನಿರ್ದೇಶಕರು ಕೆಲಸದಿಂದ ತೆಗೆದ ಹಾಕಿದ್ದ ಬೆಳಗಾಂದಲ್ಲಿನ ಹಿರಿಯ ಸಹಾಯಕ ಮ್ಯಾನೇಜರ್ ಒಬ್ಬರನ್ನು ಪುನರ್ ನೇಮಕ ಮಾಡಬೇಕೆಂಬುದಾಗಿ ಸಂಬಂಧಿಸಿದ ಮಂತ್ರಿಗಳು ಆದೇಶ ನೀಡಿದ್ದಾಗ್ಯೂ ಅವರ ಆದೇಶವನ್ನು ಕಡೆಗಣಿಸಿ ಇದುವರೆಗೂ ಪುನರ್ ನೇಮಕ ಆದೇಶ ಹೊರಡಿಸದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ, ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಳ್ಳುವ ಕ್ರಮವೇನು ?

ಈ ಇಂತಹ ಬೇಜವಾಬ್ದಾರಿ ಹಾಗೂ ಸಚಿವರ ಆದೇಶವನ್ನು ಕಡೆಗಣಿಸಿದ ಸದರಿ ಅಧಿಕಾರಿಯ ಮೇಲೆ ಸೂಕ್ತ ಕ್ರಮ ಕೈಗೊಳ್ಳುವುದಲ್ಲದೆ ತಕ್ಷಣ ವರ್ಗ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಆರ್. ವಿ. ದೇಶಪಾಂಡೆ(ಕೃಷಿ ಸಚಿವರು).—

ಅ) ಕನ್ನಡಿಗರು ೪೬೩
ಕನ್ನಡೇತರರು ೩೦

ಆ) ಇಲ್ಲ.

ಇ) ಶ್ರೀ ಎನ್.ಬಿ. ಹೂಲಿಮನಿ ಯವರನ್ನು ಕರ್ನಾಟಕ ಸ್ಟೇಟ್ ಆಗ್ರೊ ಕಾರನ್ ಪ್ರಾಡಕ್ಟ್ಸ ನ ನಿಗಮವು ಹಣ ದುರುಪಯೋಗ ಮತ್ತು ದಾಸ್ತಾನು ಕೊರತೆ ಎಂಬ ಆರೋಪಗಳ ಮೇಲೆ ಕಂಪನಿಯ ಸೇವೆಯಿಂದ ವಜಾ ಮಾಡಿತು. ಕ್ರಮಬದ್ಧ ತನಿಖೆ ನಡೆಸಿ ಸದರಿ ನೌಕರರನ್ನು ವಜಾ ಮಾಡಿದ ಕಾರಣದಿಂದಲೂ, ಹಣ ದುರುಪಯೋಗ ಮತ್ತು ದಾಸ್ತಾನು ಕೊರತೆ ಬಗ್ಗೆ ಇರುವ ಆರೋಪಗಳು ಸಾಬೀತಾಗಿರುವುದರಿಂದಲೂ, ಮತ್ತು ಅಧಿಕಾರಿಯು ಎಸಗಿದ ಅಕ್ರಮಗಳು ಗಂಭೀರವಾಗಿದ್ದ ಕಾರಣದಿಂದ ನಿಗಮದ ವ್ಯವಸ್ಥಾಪಕ ನಿರ್ದೇಶಕರು ತೆಗೆದುಕೊಂಡ ಕ್ರಮವನ್ನು ವ್ಯವಸ್ಥಾಪಕ ಮಂಡಳಿಯು ಸ್ಥಿರೀಕರಿಸಿ ನೌಕರರ ಅಪೀಲನ್ನು ತಿರಸ್ಕರಿಸಲಾದ ಕಾರಣದಿಂದಲೂ, ಸರ್ಕಾರವು ಈ ವಿಷಯದಲ್ಲಿ ಹಸ್ತಕ್ಷೇಪ ಮಾಡಲಾರದೆಂದು ಅಂತಿಮವಾಗಿ ನಿರ್ಧರಿಸಿತು.

ಈ) ಉದ್ಭವಿಸುವುದಿಲ್ಲ.

ಶ್ರೀ ಬಿ. ಲಕ್ಕಪ್ಪ.—ನನ್ನ ಮೊದಲನೆಯ ಪ್ರಶ್ನೆಗೆ ಉತ್ತರವಾಗಿ ಮಂತ್ರಿಗಳು ಕರ್ನಾಟಕ ಆಗ್ರೋ ಕಾರನ್ ಕಂಪನಿಯಲ್ಲಿ ೩೦ ಜನ ಕನ್ನಡೇತರ ಅಧಿಕಾರಿಗಳು ಇದ್ದಾರೆಂದು ಹೇಳಿದ್ದಾರೆ. ಅದರಲ್ಲಿ ಒಳ್ಳೆಯ ಹುದ್ದೆಗಳಲ್ಲಿ ಹೊರ ರಾಜ್ಯದವರೇ ಇದ್ದಾರೆ, ರಿಕ್ರೂಟ್‌ಮೆಂಟ್ ಮಾಡುವ ಕಾಲಕ್ಕೆ ನಮ್ಮ ರಾಜ್ಯದಲ್ಲಿ ಅರ್ಹತೆ ಇರತಕ್ಕವರು ಸಿಗಲಿಲ್ಲವ ? ಅಲ್ಲಿರತಕ್ಕವರಿಗೆ ಕನ್ನಡ ಓದುವುದಕ್ಕೆ ಬರೆಯುವುದಕ್ಕೆ ಬರುವುದಿಲ್ಲ, ೧೯೮೩-೮೪, ೧೯೮೪-೮೫ನೇ ಸಾಲಿನ ಆಡಿಟ್ ರಿಪೋರ್ಟ್‌ನಲ್ಲಿ ಯಾವುದೇ ಅಬ್ಜೆಕ್ಷನ್ ಇಲ್ಲದೇ ಇದ್ದರೂ ಕೆಲವರನ್ನು ಡಿಸ್‌ಮಿಸ್ ಮಾಡಿದ್ದಾರೆ. ಡಿಸ್‌ಮಿಸ್ ಮಾಡಬೇಕಾದವರಿಗೆ ಅಲ್ಲಿರತಕ್ಕ ಮ್ಯಾನೇಜಿಂಗ್ ಡೈರೆಕ್ಟರ್‌ರವರು ಪ್ರಮೋಷನ್ ಕೊಟ್ಟಿದ್ದಾರೆ. ೧೬ ವರ್ಷಗಳ ಕಾಲ ಯಾವುದೇ ರೀತಿಯ ಲಂಚರುಷುವತ್ತುಗಳಿಗೆ ಒಳಗಾಗದೇ ಇರತಕ್ಕ, ಪ್ರಾಮಾಣಿಕವಾಗಿ ಸೇವೆ ಮಾಡತಕ್ಕವರನ್ನು ಡಿಸ್‌ಮಿಸ್ ಮಾಡಿದ್ದಾರೆ. ಆಡಿಟ್ ರಿಪೋರ್ಟ್‌ನಲ್ಲಿ ಯಾವುದೇ ಅಬ್ಜೆಕ್ಷನ್ ಇಲ್ಲದೇ ಇದ್ದರೂ ಸರ್‌ಪ್ರೈಸ್ ವಿಸಿಟ್ ಮಾಡಿ, ಎನ್‌ಕ್ವಯರಿ ಮಾಡಿ ಡಿಸ್‌ಮಿಸ್ ಮಾಡಿದ್ದಾರೆ. ಆ ನೌಕರರನ್ನು ಪುನಃ ಕೆಲಸಕ್ಕೆ ನೇಮಿಸಿಕೊಳ್ಳಬೇಕೆಂದು ಮಂತ್ರಿಗಳು ಹೇಳಿದರೂ, ಸರ್ಕಾರದ ಆದೇಶವನ್ನು ಕಡೆಗಣಿಸಿ ಡಿಸ್‌ಮಿಸ್ ಮಾಡಿದ್ದಾರೆ. ಎಲ್ಲಾ ಇಲಾಖೆಗಳಲ್ಲಿನ ಆಡಿಟ್ ರಿಪೋರ್ಟ್‌ನಲ್ಲಿ ಕಂಡಿರತಕ್ಕ ಅನೇಕ ಲೋಷದೋಷಗಳು ಹಣ ದುರುಪಯೋಗದ ಆರೋಪಗಳು ಬೇಕಾದಷ್ಟು ಸರ್ಕಾರದಲ್ಲಿವೆ, ಆ ತರಹ ಇದ್ದರೂ ಸಹ ಅಂತಹ ಅಧಿಕಾರಿಗಳನ್ನು ಮುಂದುವರಿಸಿಕೊಂಡು ಅವರಿಗೆ ಪ್ರಮೋಷನ್ ಕೊಡುತ್ತಿದ್ದಾರೆ. ಈ ಅಧಿಕಾರಿಯಿಂದ ೬೦ ಸಾವಿರ ರೂಪಾಯಿ ಹಣ ದುರುಪಯೋಗವಾಗಿದೆಯೆಂದು ಹೇಳುತ್ತಾರೆ ಈ ಬಗ್ಗೆ ನನಗೆ ಉತ್ತರ ಬೇಕು.

ಶ್ರೀ ಆರ್. ವಿ. ದೇಶಪಾಂಡೆ.—ಕನ್ನಡೇತರರು ೩೦ ಜನರಿದ್ದಾರೆಂದರು. ನಿಜ. ಈ ಕಾರ್ಪೊರೇಷನ್ ೧೯೭೩-೭೪ ರಲ್ಲಿ ಶುರುವಾಗಿದೆ. ಆಗಿನಿಂದ ಇಲ್ಲಿಯವರೆಗೆ ೩೦ ಜನ ರೆಕ್ರೂಟ್ ಆದುದ್ದು ನಿಜ. ಅಪವಾದ ಯಾರ ಮೇಲೆ ಇದೆ, ಅವರ ಮೇಲೆ ಕ್ರಮ ಕೈಗೊಂಡಿಲ್ಲವೆಂದರು. ಅದನ್ನು ಸರ್ಕಾರದ ಗಮನಕ್ಕೆ ತಂದರೆ ಸರ್ಕಾರ ಕ್ರಮ ಕೈಗೊಳ್ಳುತ್ತದೆ. ಅವರು ಒಳ್ಳೆಯ ಅಧಿಕಾರಿಗಳು ಎಂದು ಹೇಳುತ್ತಿದ್ದಾರೆ. ಆದರೆ ಇಲ್ಲಿ ಆ ಅಧಿಕಾರಿಗಳು ೬೩ ಸಾವಿರ ರೂಪಾಯಿಗಳ ಹಣ ದುರುಪಯೋಗ ಮಾಡಿರುವ ಅಪಾದನೆಯನ್ನು ಹೊತ್ತಿದ್ದಾರೆ, ಮತ್ತು ಒಂದು ಲಕ್ಷದ ೩೬ ಸಾವಿರ ರೂಪಾಯಿಗಳ ಪಾರ್ಟೇಜ್ ಹಾಗೂ ೯೭ ಸಾವಿರ ರೂಪಾಯಿಗಳ ನಿಯಮವಲ್ಲದ ಕ್ರಮಗಳು ಇವೆ. ಇವುಗಳ ಬಗ್ಗೆ ವಿಚಾರಣೆ ಮಾಡಿ ಅವಕಾಶ ಕೊಟ್ಟು ೧೨-೧೧-೮೬ ರಲ್ಲಿ ಡಿಸ್‌ಮಿಸ್ ಮಾಡಿದ್ದೇವೆ. ಆ ಮೇಲೆ ಅವರು ಅಪೀಲು ಹಾಕಿದರು. ಅದು ಕೂಡ ರಿಜೆಕ್ಟ್ ಆಗಿದೆ.

ಶ್ರೀ ಜಿ. ಎಂ. ಕಾವಡೆ.—೧೯೭೪ ರಲ್ಲಿ ೧೫ ರಿಂದ ೨೦ ಲಕ್ಷ ರೂಪಾಯಿಗಳ ಅವ್ಯವಹಾರ ಮಾಡಿದ ೧೩ ಮಂದಿ ಅಧಿಕಾರಿಗಳು ಕೃಷಿ ಇಲಾಖೆಯಲ್ಲಿದ್ದಾರೆ. ಅದು ಮಾನ್ಯ ರಾಜ್ಯಪಾಲರ

ಗಮನಕ್ಕೆ ಬಂದಿದ್ದರೂ ಇವೊತ್ತಿನವರೆಗೆ ಮಂತ್ರಿಗಳು ಕ್ರಮ ಕೈಗೊಂಡಿಲ್ಲ. ಅಷ್ಟು ಮಾಡಲಿಕ್ಕೆ ಅವರಿಗೆ ಹೆದರಿಕೆ. ಅವರ ಮೇಲೆ ಕ್ರಮ ಕೈಗೊಳ್ಳಬೇಕೆಂದು ಹಿಂದಿನ ಸಚಿವರು ಆರ್ಡರ್ ಮಾಡಿದ್ದರೂ ಅದನ್ನು ಅಧಿಕಾರಿಗಳು ಕೇಳಲಿಲ್ಲ. ಅಲ್ಲಿ ೪೦೦ ಮಂದಿ ನೌಕರರು ಕರ್ನಾಟಕದವರು ಮತ್ತು ೩೦ ಮಂದಿ ಹೊರಗಿನವರು ಇದಾ ರೆ. ಅಂದರೆ ೪೦೦ ಮಂದಿ ಕಂರಿಗಳು ಮತ್ತು ೩೦ ಮಂದಿ ಸಿಂಹಗಳು ಇದ್ದಾರೆಂದು ಹೇಳಬಹುದು. ಅಲ್ಲಿ ಯಾಯ್ಯಾವ ಅಧಿಕಾರಿಗಳು ಏನೇನು ಕೆಲಸದಲ್ಲಿದ್ದಾರೆ ಮತ್ತು ಎಂ.ಡಿ. ಎಷ್ಟು ಮಂದಿ ಇದ್ದಾರೆ ? ಇವರು ಉತ್ತರ ಹೇಳುವಾಗ ಜವಾನರನ್ನು ಸೇರಿಸಿ ಹೇಳುತ್ತಾರೆ. ೧೯೭೩ ರಲ್ಲಿ ೧೩ ಮಂದಿ ಮೇಲೆ ಅವ್ಯಹಾರ ನಡೆದದ್ದರ ಬಗ್ಗೆ ತನಿಖೆ ಮಾಡಿ ೪ ವರ್ಷವಾದರೂ ಏನೂ ಕ್ರಮ ಕೈಗೊಳ್ಳದೆ ಕೇವಲ ಒಬ್ಬರನ್ನೇ ಡಿಸ್‌ಮಿಸ್ ಮಾಡಲಿಕ್ಕೆ ಏನು ಕಾರಣ ?

ಶ್ರೀ ಆರ್. ವಿ. ದೇಶಪಾಂಡೆ.—ಈ ನಿಗಮ ಸ್ಥಾಪನೆಯಾದದ್ದು ೧೯೭೩–೭೪ ರಲ್ಲಿ ೧೯೭೪ ರಲ್ಲಿ ೧೩ ಮಂದಿ ಮೇಲೆ ತನಿಖೆ ನಡೆಸಿ ಡಿಸ್‌ಮಿಸ್ ಮಾಡಿದ ವರೆದಿ ಇದೆ ಎಂದೂ ಹೇಳುತ್ತಾರೆ. ಅದು ಸರ್ಕಾರದ ಗಮನಕ್ಕೆ ಬಂದಿಲ್ಲ. ಅದನ್ನು ನಮ್ಮ ಗಮನಕ್ಕೆ ತಂದರೆ, ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುತ್ತೇವೆ. ಅದನ್ನು ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತರಬೇಕು. ಎಷ್ಟು ಜನ ಎಂ.ಡಿ. ಇದ್ದಾರೆಂದು ಕೇಳಿದ್ದಾರೆ. ಒಬ್ಬರೇ ಒಬ್ಬರು ಎಂ.ಡಿ. ಇರುವುದು ಉಳಿದ ಅಧಿಕಾರಿಗಳಲ್ಲಿ ಯಾರು ಹುಲಿ, ಯಾರು ಸಿಂಹ ಇದ್ದಾರೆಂದು ಗೊತ್ತಿಲ್ಲ. ೩೦ ಜನ ಅಷ್ಟೇ ಅಧಿಕಾರಿಗಳು ಇರುವುದು.

ಶ್ರೀ ಆರ್.ಎ. ನಾಯಕ್.—ಹುಲಿಗಳು ಸಿಂಹಗಳು ಯಾವುವು ?

ಅಧ್ಯಕ್ಷರು.—ಮಾನ್ಯ ಸದಸ್ಯರು ಮಾತನಾಡಬೇಕಾದರೆ ಅಧ್ಯಕ್ಷರ ಅನುಮತಿ ತೆಗೆದುಕೊಂಡು ಮಾತನಾಡಬೇಕು.

ಶ್ರೀ ಬಿ. ಲಕ್ಕಪ್ಪ.—ಕಂಪನಿಗೆ ಪರ್ಚೇಸ್ ಮಾಡುವುದಕ್ಕೆ ಏಜೆಂಟ್ ಇದ್ದಾರೆ. ಅವರಿಗೆ ಮುಂಗಡವಾಗಿ ಹಣ ಕೊಡಲಾಗುತ್ತದೆ. ಆ ರೀತಿ ೫೦ ಲಕ್ಷ ರೂಪಾಯಿಗಳನ್ನು ಮುಂಗಡವಾಗಿ ಕೊಡಬೇಕಾಗಿರುವುದರಲ್ಲಿ ೨೦ ಲಕ್ಷ ರೂಪಾಯಿಗಳನ್ನು ಇಟ್ಟುಕೊಂಡಿದ್ದಾರೆ. ಪೂರ್ಣ ಹಣ ಅವರಿಗೆ ಹೋಗದೆ ಬ್ಯಾಂಕ್ ಕರಪ್ಟ್ ಎಂದೂ ಡಿಕ್ಲೇರ್ ಮಾಡಿ ೨೦ ಲಕ್ಷ ರೂಪಾಯಿಗಳನ್ನು ಅಧಿಕಾರಿಗಳೇ ಹೊಡೆದಿದ್ದಾರೆ. ಆ ಅಧಿಕಾರಿಗಳ ಮೇಲೆ ಸಿಬಿಐ ತನಿಖೆ ನಡೆಸಿ. ಉನ್ನತ ಅಧಿಕಾರಿಗಳು ೫೦–೬೦ ಲಕ್ಷ ರೂಪಾಯಿಗಳ ಆಸ್ತಿ ಸಂಪಾದಿಸಿದ್ದಾರೆ. ದುರ್ವ್ಯವಹಾರ ಮಾಡುವ ಮತ್ತು ಲಂಚ ಹೊಡೆಯುವ ಮೂಲಕ ಅಷ್ಟು ಆಸ್ತಿ ಹೊಂದಿದ್ದಾರೆ, ಅವರ ಮೇಲೆ ನೀವು ತನಿಖೆ ನಡೆಸುವುದಕ್ಕೆ ಸಿದ್ಧರಿದ್ದೀರಾ ? ಅಲ್ಲಿ ಯಂತ್ರೋಪಕರಣಗಳನ್ನು ಕೊಳ್ಳುತಕ್ಕ ವ್ಯವಹಾರದಲ್ಲಿ ಒಂದಕ್ಕೆ ಎರಡರಷ್ಟು ಕೊಟ್ಟು ಹಣ ದುರುಪಯೋಗ ಮಾಡಿದ್ದಾರೆ. ರಾಯದುರ್ಗದ ಶಾಲಾ ಮಕ್ಕಳಿಗೆ ಪೌಷ್ಟಿಕ ಆಹಾರ ಸರಬರಾಜು ಮಾಡಿರುವುದು ಇದೆ. ಅದು ವಿಷಪೂರಿತವಾಗಿದ್ದು ೫೦೦ ಮಕ್ಕಳು ಅದನ್ನು ಸೇವಿಸಿ ತೊಂದರೆಗೀಡಾಗಿದ್ದಾರೆ ಅದರ ಬಗ್ಗೆ ಸಿಬಿಐ, ತನಿಖೆ ನಡೆಸಿ ಅದಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು,

ಶ್ರೀ ಆರ್.ವಿ. ದೇಶಪಾಂಡೆ.—ನೇರವಾಗಿ ಅಧಿಕಾರಿಗಳ ಮೇಲೆ ಆಪಾದನೆ ಇದ್ದಾಗ ಸ್ಪಷ್ಟವಾಗಿ ಇಂಥ ಅಧಿಕಾರಿ ಎಂದು ಹೇಳುವುದು ಒಳ್ಳೆಯದು. ಅದು ಬಿಟ್ಟು ವೇಗ್ ಆಗಿ ೧೩ ಜನ ಅಧಿಕಾರಿಗಳಿದ್ದಾರೆ, ಅವರು ಹಣ ತಿಂದಿದ್ದಾರೆ ಎಂದರೆ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಶಾಸಕರಲ್ಲಿ ವಿನಂತಿಸುವುದೇನೆಂದರೆ ನೇರವಾಗಿ ನಿರ್ದಿಷ್ಟವಾಗಿ ಆಪಾದನೆಯನ್ನು ಸರ್ಕಾರದ ಗಮನಕ್ಕೆ ತಂದರೆ ಖಂಡಿತ ಸರ್ಕಾರ ಅಂಥವರ ವಿರುದ್ಧ ಕ್ರಮ ಕೈಗೊಳ್ಳುತ್ತದೆ. ಯಾವ ಅಧಿಕಾರಿಗಳ ಬಗ್ಗೆ ತಾವು ಹೇಳುತ್ತಿದ್ದೀರಿ ?.....

ಶ್ರೀ ಆರ್. ವೆಂಕಟರಾಮಯ್ಯ. –ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಕಮಿಟಿ ರಿಪೋರ್ಟ್ ಇದೆ.

ಅಧ್ಯಕ್ಷರು.—ಈ ರೀತಿ ಮುಂದುವರಿಸುತ್ತಿದ್ದರೆ ಪ್ರಶ್ನೋತ್ತರ ವೇಳೆ ಆಯಿತು ಎಂದೂ ಹೇಳುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಸಾಕಷ್ಟು ಪುರಾವೆಗಳು ಇವೆ. ಅದರ ಮೇಲೆ ಕ್ರಮ ಕೈಗೊಳ್ಳಲಿ.

(ಗೊಂದಲ)

ಅಧ್ಯಕ್ಷರು.—ದಯವಮಾಡಿ ಸದಸ್ಯರೆಲ್ಲರೂ ಕುಳಿತುಕೊಳ್ಳಬೇಕು.

ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೆ, ಅದರ ಬಗ್ಗೆ ಸ್ಪಷ್ಟವಾಗಿ ಪಿ.ಎ.ಸಿ.ರಿಪೋರ್ಟ್‌ನಲ್ಲಿ ಹೇಳಿದ್ದಾರೆ.

ಅಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರೆ, ತಾವು ಮಾತನಾಡಲಿಕ್ಕೆ ನನ್ನ ಪರ್‌ಮಿಷನ್ ತೆಗೆದುಕೊಂಡಿಲ್ಲ, ದಯವಮಾಡಿ ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಗೋಪಾಲ ಮಯಂಕುಂದ ಕಾನಡೆ.—ಇಷ್ಟು ಮುಂದೆ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕೆಂದು ಇದೆ. ಅದನ್ನು ಈಗ ನಾನು ಸಭೆಯ ಮುಂದಿಡುತ್ತೇನೆ, ಈಗಲಾದರೂ ತಾವು ಕ್ರಮ ತೆಗೆದುಕೊಳ್ಳುತ್ತೀರಾ ?

(ಗೊಂದಲ)

ಅಧ್ಯಕ್ಷರು.—ನಾನು ಇದಕ್ಕೆ ಅರ್ಧಗಂಟೆ ಕಾಲಾವಧಿ ಚರ್ಚೆಗೆ ಅನುಮತಿ ಕೊಡುತ್ತೇನೆ. ದಯವಮಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಗೋಪಾಲ ಮಯಂಕುಂದ ಕಾನಡೆ.—ಅಧ್ಯಕ್ಷರೆ, ಅರ್ಧಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಕೊಡುತ್ತೇನೆ ಎಂದು ಇವತ್ತು ಹೇಳುತ್ತೀರಿ. ನಾಳೆ ಈ ಮಂತ್ರಿಗಳ ಸಬ್ಜೆಕ್ಟ ಇಲ್ಲ, ಮುಂದಿನ ವಾರ ಎಂದೂ ಹೇಳುತ್ತೀರಿ.....

(ಗೊಂದಲ)

ಅಧ್ಯಕ್ಷರು.—ಈಗ ತಾವು ಏನು ಹೇಳಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ಈಗ ನಾನು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಕೊಡುತ್ತೇನೆಂದು ಹೇಳಿದ್ದೇನೆ. ದಯವಮಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು. ಈಗ ಇನ್ನೂ ೭ ಪ್ರಶ್ನೆಗಳು ಇವೆ, ಈಗಾಗಲೇ ಒಂದು ಗಂಟೆ ವೇಳೆ ಮುಗಿಯಿತು. ಈಗ ಈ ಪ್ರಶ್ನೆಗಳನ್ನು ಲ್ಯಾಪ್ಸ್ ಮಾಡಬೇಕೋ ಅಥವಾ ಬೇಡವೋ ಎನ್ನುವ ಬಗ್ಗೆ

ಶ್ರೀಮತಿ ನಾಗರತ್ನಮ್ಮನವರು ಈ ಸ್ಥಾನದಲ್ಲಿ ಬಹಳ ದಿವಸ ಇದ್ದುದರಿಂದ ಅವರು ಈಗ ನಾನು ಏನು ಮಾಡಬೇಕು ಎನ್ನುವುದನ್ನು ಹೇಳಬೇಕು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಒಂದು ದಿವಸಕ್ಕೆ ೨೦ ಪ್ರಶ್ನೆಗಳನ್ನು ಏತಕ್ಕೆ ಹಾಕಬೇಕು. ಪೂರಕ ಪ್ರಶ್ನೆಗಳು ಯಾವು ಇರುತ್ತವೆ ಅವುಗಳಿಗೆ ಅವಕಾಶ ಕೊಡಬೇಕು. ಎಲ್ಲಾ ಪ್ರಶ್ನೆಗಳಿಗೂ ಒಂದೇ ಮಂತ್ರ ಅಪ್ಲೈ ಮಾಡಿದರೆ ಆಗುವುದಿಲ್ಲ.

ಅಧ್ಯಕ್ಷರು.—ನಾಳೆ ಮಾತ್ರ ನಾನು ಯಾರಿಗೂ ಅವಕಾಶ ಕೊಡುವುದಿಲ್ಲ. ಮುಂದಿನ ಪ್ರಶ್ನೆಯನ್ನು ಮಾನ್ಯ ಎಸ್.ಎಸ್. ಕಡಪಟ್ಟಿಯವರು ಕೇಳಬೇಕು.

ಕೃಷ್ಣ ಕಣಿವೆಯ ನೀರಿನ ಉಪಯೋಗದ ಬಗ್ಗೆ

೨೬೮. ಶ್ರೀ ಎಸ್. ಎಸ್. ಕಡಪಟ್ಟಿ.—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೃಷ್ಣ ಕಣಿವೆಯಲ್ಲಿಯೂ ನಮ್ಮ ಪಾಲಿನ ಒಂದು ಹನಿ ನೀರನ್ನು ಬಿಟ್ಟುಕೊಡುವುದಿಲ್ಲ ಅಂತ ಈ ಸದನದಲ್ಲಿ ಹಾಗೂ ಹೊರಗೆ ಈ ರಾಜ್ಯದ ಜನತೆಗೆ ಸಚಿವರು ಭರವಸೆ ಕೊಟ್ಟಿದ್ದು ನಿಜವೆ ?

ಆ) ಹಾಗಿದ್ದಲ್ಲಿ, ಇನ್ನು ಉಳಿದಿರುವ ಕೇವಲ ೧೨ ವರ್ಷಗಳಲ್ಲಿ ಬಚಾವತ್ ಅವಾರ್ಡ್ ಪ್ರಕಾರ ಕರ್ನಾಟಕಕ್ಕೆ ಕೊಡ ಮಾಡಿದ ನೀರಿನ ಸಂಪೂರ್ಣ ಉಪಯೋಗ ಮಾಡಲಿಕ್ಕೆ ತೆಗೆದುಕೊಂಡ ನಿರ್ದಿಷ್ಟ ಕ್ರಮ ಭೌತಿಕ ಹಾಗೂ ಆರ್ಥಿಕ ಗುರಿಯಾನ್ನು ಪ್ರತಿ ವರ್ಷ ಮಾಡಲು ಉದ್ದೇಶಿಸಿದ ಗುರಿ ವಿವರ ಸಹಿತ ಕೊಡುವುದು ?